# ಆಟ ಮತ್ತು ಮಕ್ಕಳ ಬೆಳವಣಿಗೆ



# ಆಟ ಎಂದರೇನು?

ಕಿಂಡರ್‌ಗಾರ್ಡನ್‌ನ ಪಿತಾಮಹರಾದ ಫ್ರೋಬೆಲ್ ಪ್ರಕಾರ "ಆಟ ಎಂದರೆ ಮಕ್ಕಳ ಕೆಲಸ". ಆಟವು ಮಕ್ಕಳ ಜೀವನಾವಧಿ ಕಲಿಕೆಗೆ ಅಡಿಪಾಯವನ್ನು ನಿರ್ಮಿಸುತ್ತದೆ.

ಮಕ್ಕಳ ಮನಶ್ಶಾಸ್ತ್ರಜ್ಞರಾದ ವೈಗೋಸ್ಕಿ ಸಿದ್ಧಾಂತ ಪ್ರಕಾರ " ಆಟವು ಭೌದ್ಧಿಕ ಬೆಳವಣಿಗೆಗೆ ಅನುಕೂಲವಾಗುತ್ತದೆ. ಮಕ್ಕಳು ತಮಗೆ ಗೊತ್ತಿರುವುದನ್ನು ಅಭ್ಯಾಸ ಮಾಡುವುದಲ್ಲದೆ, ಹೊಸ ವಿಷಯಗಳನ್ನು ಕಲಿಯುತ್ತಾರೆ"

"ಮಕ್ಕಳ ಪ್ರಕಾರ ಆಟ ಎಂದರೆ ಏನಿರಬಹುದು? "ಮಕ್ಕಳು ಖುಷಿಯಾಗಿರುವುದು, ಗೆಳಯರೊಂದಿಗಿನ ಒಡನಾಟ, ಚಟುವಟಿಕೆಗಳನ್ನು ಸ್ವತಃ ಆರಿಸಿಕೊಳ್ಳುವುದು ಮತ್ತು ಹೊರಾಂಗಣದಲ್ಲಿರುವುದು"

# ಆಟದ ಪ್ರಾಮುಖ್ಯತೆ

- ಮಕ್ಕಳು ತಮ್ಮ  ಬಗ್ಗೆ ಮತ್ತು ಅವರ ಸುತ್ತಲಿನ ಪ್ರಪಂಚದ ಬಗ್ಗೆ ಕಲಿಕೆ
- ಆಯ್ಕೆಗಳನ್ನು ಮಾಡಲು ಮತ್ತು ಸಮಸ್ಯೆಗಳನ್ನು ಪರಿಹರಿಸಲು ಅವಕಾಶ
- ಮಕ್ಕಳು ತಮ್ಮ ಕಲ್ಪನೆಯನ್ನು ಬಳಸಲು ಅವಕಾಶ (ಸಾಂಕೇತಿಕ ಆಟ)
- ಸ್ನೇಹಿತರನ್ನು ಗಳಿಸುವ ಒಂದು ಮಾರ್ಗ
- ಆತಂರಿಕ ಭಾವನೆಗಳನ್ನು ವ್ಯಕ್ತಪಡಿಸಲು ಹಾಗೂ ಹೊರಹಾಕಲು ಸಹಾಯ (ಚಿಕಿತ್ಸಾ ರೂಪ)
- ಸಾಮಾಜಿಕ ಕೌಶ್ಯಲ್ಯಗಳಾದ – ಸಹಾಯ ಮಾಡುವ, ತನ್ನ ಸರದಿಗಾಗಿ ಕಾಯುವ, ಸಂದಾನ/ಒಪ್ಪಂದ ಮಾಡಿಕೊಳ್ಳುವ ಮುಂತಾದವುಗಳನ್ನು ಕಲಿಕೆ
- ದೈಹಿಕ ಆರ್ರ್ಯೋಗ್ಯ ಮತ್ತು ಶೈಕ್ಷಣಿಕ ಪ್ರಗತಿ

# ಆಟದ ವಿಧಗಳು

- ಮುಕ್ತ ಆಟ (ಒಳಾಂಗಣ/ಹೊರಾಂಗಣ)
- ಸಂರಚಿತ ಆಟ (ಒಳಾಂಗಣ/ಹೊರಾಂಗಣ)

# ಮುಕ್ತ ಆಟ

- ಮಕ್ಕಳು ತಮಗೆ ಇಷ್ಟ ಬಂದ ಹಾಗೆ ವೈಯಕ್ತಿಕವಾಗಿ ಅಥವಾ ಗುಂಪಿನಲ್ಲಿ , ಯಾರ ಮಾರ್ಗದರ್ಶನವಿಲ್ಲದೆ ಅವರದೇ ಆದ ಆಸಕ್ತಿಯಿಂದ ಮತ್ತು ಒತ್ತಡವಿಲ್ಲದ ಆಡುವುದೇ ಮುಕ್ತ ಆಟವಾಗಿದೆ.
- ಮುಕ್ತ ಆಟದಲ್ಲಿ ಎಲ್ಲಾ ವಿಧದ ಆಟಿಕೆಗಳೊಂದಿಗೆ ಆಡುವ, ಅನ್ವೇಷಿಸುವ, ಅದರಿಂದ ಹೊಸ ವಿಷಯಗಳನ್ನು ಕಲಿಯುವ ಮತ್ತು ಆ ವಸ್ತುಗಳನ್ನು ಅವರದೆ ಆದಂತಹ ಪರಿಕಲ್ಪನೆಯ ಲೋಕಕ್ಕೆ ಅಳವಡಿಸಿಕೊಳ್ಳುತ್ತಾರೆ
- ಮುಕ್ತ ಆಟವು ಒಳಾಂಗಣ ಹಾಗೂ ಹೊರಾಂಗಣದಲ್ಲಿ ಯಾವುದೇ ಆಟಿಕೆಯಿಲ್ಲದೆಯೂ ನಡೆಯುತ್ತದೆ

# Patterns of Play



# ಸಂರಚಿತ/ ಮಾರ್ಗದರ್ಶಿತ ಆಟವು

- ನಿರ್ದಿಷ್ಟ ಉದ್ದೇಶ ಹಾಗೂ ನಿಯಮಗಳು ಇರುತ್ತವೆ
- ಮಗು ನಿರ್ದೇಶಿತ/ಶಿಕ್ಷಕಿ ನಿರ್ದೇಶಿತ
- ಸುಗಮಕಾರರು ಆಟಕ್ಕೆ ಬೇಕಾದ ಮಾಹಿತಿ, ಸೂಚನೆಗಳು, ಮಾರ್ಗದರ್ಶನವನ್ನು ನೀಡಬೇಕಾಗುತ್ತದೆ
- ಮಕ್ಕಳ ವಯಸ್ಸಿಗನುಗುಣವಾಗಿ ಬೇರೆ ಬೇರೆ ರೀತಿಯ ಆಟವನ್ನು ಆಯೋಜಿಸಲಾಗುತ್ತದೆ
- ಒಳಾಂಗಣ ಮತ್ತು ಹೊರಾಂಗಣದಲ್ಲಿ ಆಡಿಸಲಾಗುವುದು
- ಎಲ್ಲಾ ಮಕ್ಕಳಿಗೆ ಸಮಾನ ಅವಕಾಶ ನೀಡಬೇಕಾಗುವುದು

# ಮುಕ್ತ ಆಟದಲ್ಲಿ ಶಿಕ್ಷಕಿಯರ ಪಾತ್ರ

ಕಲಿಕಾ ಪೂರಕ ವಾತಾವರಣ

- ತರಗತಿಯನ್ನು ಸಿದ್ದಗೊಳಿಸುವುದು –ಕಲಿಕಾ ಸಾಮಗ್ರಿಗಳ ಸಂಘಟನೆ, ಲರ್ನಿಂಗ ಕಾರ್ನರ್ ಸೆಟಪ್
- ಸ್ವಚ್ಛ ಮತ್ತು ಸುರಕ್ಷಿತ
- ಮಕ್ಕಳ ಜೊತೆ ಮಾತುಕತೆ ಮತ್ತು ಅವಶ್ಯವಿದ್ದರೆ ಸಹಾಯ
- ಮಕ್ಕಳ ಆಟಕ್ಕೆ ಅವರ ಭಾವನಗಳಿಗೆ, ಅವರ ಭಾಷೆಗೆ, ಅವರ ಸಾಮರ್ಥ್ಯಕ್ಕೆ, ಸಂಸ್ಕೃತಿಗೆ ಗೌರವ
- ಮಕ್ಕಳನ್ನು ಅರ್ಥಮಾಡಿಕೊಳ್ಳುವುದು, ವಿಕ್ಷಣೆ ಹಾಗೂ ನಿರ್ವಹಣೆ


# ಸಂರಚಿತ ಆಟದಲ್ಲಿ ಶಿಕ್ಷಕಿಯ ಪಾತ್ರ

- ಮಕ್ಕಳಿಗೆ ನಿರ್ದೇಶನ, ವಿಕ್ಷಣೆ ಮತ್ತು ಆಟದ ಡೆಮೊ ಮಾಡುವುದು
- ಎಲ್ಲಾ ಮಕ್ಕಳಿಗೆ ಆಟದಲ್ಲಿ ಅವಕಾಶ ಮತ್ತು ಪಾಲ್ಗೊಳ್ಳುವಂತೆ ಪ್ರೇರಿಪಿಸುವುದು
- ವಯಸ್ಸಿಗನುಗುಣವಾದ ಆಟ ಮತ್ತು ಆಟದ ಸಂಪೂರ್ಣ ಮಾಹಿತಿ ಹಾಗೂ ಬೇಕಾದ ಸಂಪನ್ಮೂಲಗಳು ಹಿಂದಿನ ದಿನವೆ ತಯಾರಿ ಮಾಡಿಕೊಳ್ಳುವುದು
- ಸಂರಚಿತ ಆಟವಾಡಿಸುವಾಗ ವೇಳಾಪಟ್ಟಿಯಲ್ಲಿ ಕೊಟ್ಟಿರುವ ಸಮಯ ಮುಗಿದಿದೆ ಅಂತ ಅವಸರ ಮಾಡದೆ ಆಟವನ್ನು ಮಧ್ಯದಲ್ಲಿ ನಿಲ್ಲಿಸದೆ ಸರಿಯಾದ ರೀತಿಯಲ್ಲಿ ಮುಕ್ತಾಯ ಮಾಡುವುದು
- ಸ್ವಚ್ಚ ಮತು ಸುರಕ್ಷತೆಯ ವಾತಾವರಣದ ನಿರ್ಮಾಣ

# ಕೆ.ಪಿ.ಎಸ್ ಪಠ್ಯಕ್ರಮದಲ್ಲಿ ಆಟ

- ಪೂರ್ವಗಣಿತ ಪರಿಕಲ್ಪನೆಯನ್ನು ಅರ್ಥೈಸಲು
- ಯೋಜನಾಕಾರ್ಯದಲ್ಲಿ
- ಸಂಭಾಷಣೆ
- ಒಳಾಂಗಣ ಮತ್ತು ಹೊರಾಂಗಣ ಆಟ
- ಸೃಜನಾತ್ಮಕ ಚಟುವಟಿಕೆಗಳು

# ಬೆಳವಣಿಗೆಯ ಆಯಾಮಗಳು



# ದೈಹಿಕ ಬೆಳವಣಿಗೆ

- ದೊಡ್ಡ ಸ್ನಾಯುಗಳ ನಡುವಿನ ಸಮನ್ವಯತೆ ಮತ್ತು ನಿಯಂತ್ರಣದ ಬೆಳವಣಿಗೆ
- ಸಣ್ಣ ಸ್ನಾಯುಗಳು ಶಕ್ತಿಯುತವಾಗುವುದು ಮತ್ತು ಸಮನ್ವಯತೆ
- ದೇಹದ ಅಂಗಾಂಗಗಳ ಚಲನೆ
- ಕಣ್ಣು ಮತ್ತು ಕೈಗಳ ನಡುವಿನ ಸಮನ್ವಯತೆ
- ಶರೀರದ ವಿವಿಧ ಭಾಗಗಳ ಮಧ್ಯೆ ನಿಯಂತ್ರಣ
- ಆರೋಗ್ಯಯುತವಾದ ಅಭ್ಯಾಸಗಳು, ಶಾರೀರಿಕವಾಗಿ ಸ್ವಚ್ಛತೆಯಿಂದಿರುವುದು, ವಿವಿಧ ಬಗೆಯ ಆಹಾರನ್ನು ತೆಗೆದುಕೊಳ್ಳುವುದು, ರಕ್ಷಣೆಗೆ ಸಂಬಂಧಿಸಿದ ನಿಯಮಗಳನ್ನು ಪಾಲಿಸುವುದು, ಅಪಾಯಕಾರಿ ಪರಿಸ್ಥಿತಿಗಳಿಂದ ದೂರ ಇರುವುದು

# ಭಾಷಾ ಬೆಳವಣಿಗೆ

- ಕೇಳುವ ಮತ್ತು ಮಾತನಾಡುವ ಕೌಶಲ
- ಮಾತಿನ ರೂಪದಲ್ಲಿ ಮತ್ತು ಸನ್ನೆಗಳ ಮೂಲಕವ್ಯಕ್ತಪಡಿಸುವ ಕೌಶಲ
- ಹೊಸ–ಹೊಸ ಪದಗಳ ಕಲಿಕೆ
- ವಿವಿಧ ಅವಶ್ಯಕತೆಗಳಿಗೆ ಭಾಷೆಯ ಉಪಯೋಗ
- ಪೂರ್ವ ಓದುವ ಕೌಶಲ ಮತ್ತು ಆಸಕ್ತಿ
- ಬರೆಯಲು ಆಸಕ್ತಿ, ಅದಕ್ಕೆ ತಕ್ಕಂತೆ ಸಾಮರ್ಥ್ಯದ ಅಭಿವೃದ್ಧಿ

# ಬೌದ್ಧಿಕ ಬೆಳವಣಿಗೆ

- ಪೂರ್ವ ಗಣಿತದ ಪರಿಕಲ್ಪನೆ ಮತ್ತು ಕೌಶಲ
- ಕ್ರಮಾನುಗತವಾಗಿ ಆಲೋಚನೆ, ಪರಿಶೀಲನೆ,  ತಾರ್ಕಿಕವಾಗಿ ಆಲೋಚಿಸುವುದು,

  ಸಮಸ್ಯೆ ಪರಿಹಾರ ಕೌಶಲ
- ಭೌತಿಕವಾಗಿ, ಸಾಂಘಿಕವಾಗಿ ಸುತ್ತಲಿನ ಪರಿಸರವನ್ನು ಪರಿಶೀಲಿಸುವುದು,

  ಪ್ರಶ್ನೆಗಳನ್ನು ಕೇಳುವುದು, ಊಹೆ ಮಾಡುವುದು, ಸರಳೀಕರಿಸುವುದು

# ಸೌಂದರ್ಯೋಪಾಸನೆ



# ಸೌಂದರ್ಯೋಪಾಸನೆ



# ಸೌಂದರ್ಯೋಪಾಸನೆ



# ಸೃಜನಾತ್ಮಕತೆ ಮತ್ತು ಸೌಂದರ್ಯೋಪಾಸನೆ

- ಚಿತ್ರಕಲೆ ಮತ್ತು ಮಣ್ಣಿನಿಂದ ಗೊಂಬೆಗಳನ್ನು ಮಾಡುವುದರ ಮೂಲಕ ವಿವಿಧ ರೀತಿಯ ವಸ್ತುಗಳನ್ನು ತಯಾರಿಸುವುದು
- ಘಟನೆಗಳನ್ನು ಮತ್ತು ಆಲೋಚನೆಗಳನ್ನು ವಿಭಿನ್ನವಾಗಿ ವ್ಯಕ್ತಪಡಿಸುವುದು
- ಸಂಗೀತ ಮತ್ತು ನೃತ್ಯ
- ಲಭ್ಯವಿರುವ ಕಲಿಕಾ ಸಾಮಗ್ರಿಗಳಿಂದ ಹೊಸ ಬಗೆಯ ವಸ್ತುಗಳನ್ನು ತಯಾರಿಸುವುದು
- ಪರಿಸರದಲ್ಲಿರುವ ಸೌಂದರ್ಯವನ್ನು, ಸುಂದರತೆಯನ್ನು, ಪ್ರತ್ಯೇಕತೆಯನ್ನು ಗುರುತಿಸುವುದು, ವರ್ಣನೆ ಮಾಡುವುದು, ಆಸ್ವಾಧಿಸುವುದು, ಅನುಭೂತಿ ಹೊಂದುವುದು ಮತ್ತು ಅದನ್ನು ಮೆಚ್ಚಿಕೊಳ್ಳುವುದು.





# ಸಾಮಾಜಿಕ ಮತ್ತು ಭಾವನಾತ್ಮಕ ಬೆಳವಣಿಗೆ

- ನಾನು ಅನ್ನೋ ಭಾವನೆ, ಸ್ವಯಂ ನಿಯಂತ್ರಣ, ಜೀವನ ಕೌಶಲ
- ಹೊಸ ಅನುಭವಗಳನ್ನು ಮತ್ತು ಹೊಸ ವಿಷಯಗಳನ್ನು ತಿಳಿದುಕೊಳ್ಳಬೇಕೆಂಬ ಆಲೋಚನೆ ಮತ್ತು ಆಸಕ್ತಿ
- ತನಗಿರುವ ಸಾಮರ್ಥ್ಯಗಳನ್ನು ಮತ್ತು ಇಷ್ಟಗಳನ್ನು ವ್ಯಕ್ತಪಡಿಸುವುದು, ಉತ್ತಮ ಅಭ್ಯಾಸಗಳನ್ನು ತೋರ್ಪಡಿಸುವುದು ಮತ್ತು ಇತರರ ವರ್ತನೆಗಳನ್ನು ಮನ್ನಣೆ
- ತಮ್ಮ ಸಮ–ವಯಸ್ಕರೊಂದಿಗೆ, ಮತ್ತು ಸಮಾಜದ ಇತರರೊಂದಿಗೆ ಉತ್ತಮ ಸಂಬಂಧ
- ಸಹಕಾರ ಮನೋಭಾವ
- ಭಾವನೆಗಳನ್ನು ವ್ಯಕ್ತಪಡಿಸುವುದು ಹಾಗು ಬೇರೆಯವರ ಭಾವನೆಗಳನ್ನು ಅಂಗೀಕರಿಸುವುದು.

# ಆಯಾಮಗಳ ನಡುವಿನ ಪರಸ್ಪರ ಸಂಬಂಧ

# ಸಾರಾಂಶ

# ಧನ್ಯವಾದಗಳು

